(16ನೇ ಪುಟದಿಂದ)

ಅಭ್ಯರ್ಥಿಯಾಗಿ ಭಾಗವಹಿಸಿದ್ದೆ. ಹೆಸರಾಂತ ಸಾಹಿತಿ ಕುಂ.ವೀರಭದ್ರಪ್ಪ ಅವರ ನೇತೃತ್ವದಲ್ಲಿ ಕೊನೆಯ ದಿನ ನಾವೆಲ್ಲ ಅಭ್ಯರ್ಥಿಗಳು ಬಳ್ಳಾರಿಯ ಕೇಂದ್ರ ಕಾರಾಗೃಹಕ್ಕೆ ಭೇಟಿಯಿತ್ತು, ಕೆಲವು ಕೈದಿಗಳ ಸಂದರ್ಶನ ಮಾಡಿದ್ದೆವು. ಅಲ್ಲಿ ಕೈದಿಗಳು ವಿವಿಧ ಸಾಮಗ್ರಿಗಳನ್ನು ಉತ್ಪಾದಿಸುತ್ತಿದ್ದ ದೃಶ್ಯ ಇವತ್ತಿಗೂ ಕಣ್ಣ ಮುಂದಿದೆ. ಅಲ್ಲಿ ಕುರ್ಚಿ– ಮೇಜುಗಳು, ಕಸೂತಿ ಕಲೆಗಳು, ಉಡುಪು– ಇವನ್ನೆಲ್ಲ ತಯಾರಿಸುವ ವಿಭಾಗಗಳಿದ್ದುವು. ಒಳಗೆ ಬಂದವರಿಗೆ ಅಲ್ಲಿಯೇ ಎಲ್ಲವನ್ನು ಕಲಿಸುತ್ತಿದ್ದರು. ಯಾವ ಕೆಲಸವೂ ಬರದಿದ್ದವರಿಗೆ ಅಡುಗೆ ಸಹಾಯಕರ ಕೆಲಸವಾದರೂ ಇರುತ್ತಿತ್ತು. ಸ್ವಲ್ಪ ಮಟ್ಟಿಗೆ ನಂಬಿಕೆಗೆ ಅರ್ಹರಾದ ಕೈದಿಗಳನ್ನು ಬೆಳಿಗ್ಗೆ ಹೊಲದ ಕೆಲಸಕ್ಕೆ ಕರೆದೊಯ್ದು ಸಂಜೆಗೆ ವಾಪಸ್ ಕರೆತರುತ್ತಾರೆ. ಇವರು ಉತ್ಪಾದಿಸಿದ ಧಾನ್ಯ ಸರಕಾರಿ ಗೋದಾಮಿಗೆ ಹೋಗುತ್ತದೆ.

ದೇಶದಲ್ಲಿ ಸುಮಾರು 1,300 ಕ್ಕೂ ಹೆಚ್ಚು ಜೈಲ್‌ಗಳಿವೆ. ಆರೋಪ ಸಾಬೀತಾಗಿ ಶಿಕ್ಷೆ ಅನುಭವಿಸುತ್ತಿರುವ ಕೈದಿಗಳಿಂದ ಮಾತ್ರ ಜೈಲುಗಳಲ್ಲಿ ಕೆಲಸ ಮಾಡಿಸುತ್ತಾರೆ. ಆದರೆ ಎಲ್ಲ ಜೈಲುಗಳಲ್ಲೂ ಶಿಕ್ಷೆಗೆ ಗುರಿಯಾದ ಕೈದಿಗಳನ್ನು ಇರಿಸುವುದಿಲ್ಲ. ಕೆಲವು ಜೈಲುಗಳಲ್ಲಿ ಅಂಡರ್‌ಟ್ರಯಲ್ ಕೈದಿಗಳಿರುತ್ತಾರೆ. ಉದಾಹರಣೆಗೆ ಮುಂಬಯಿ ಮಹಾನಗರದ ಆರ್ಥರ್ ರೋಡ್ ಜೈಲ್‌ನಲ್ಲಿ ಕೇವಲ ವಿಚಾರಣೆ ಎದುರಿಸುತ್ತಿರುವ ಆರೋಪಿಗಳನ್ನು ಮಾತ್ರ ಇರಿಸುತ್ತಾರೆ. (ಇದಕ್ಕೂ ಒಂದು ಅಪವಾದ ಇದೆ. ಪಾಕಿಸ್ತಾನದ ಉಗ್ರಗಾಮಿ ಅಜ್ಮಲ್ ಕಸಬ್‌ನನ್ನು ಇಲ್ಲೇ ಇರಿಸಲಾಗಿತ್ತು.)

ಮಹಾರಾಷ್ಟ್ರದ್ದೇ ಉದಾಹರಣೆ ನೀಡುವುದಾದರೆ ಇಲ್ಲಿ 9 ಸೆಂಟ್ರಲ್ ಜೈಲ್‌ಗಳಿವೆ. 28 ಜಿಲ್ಲಾ, 5 ಮುಕ್ತ ಮತ್ತು 172 ಉಪಜೈಲುಗಳಿವೆ. ಶಿಕ್ಷೆ ಅನುಭವಿಸುತ್ತಿರುವ ಕೈದಿಗಳನ್ನು ಪುಣೆಯ ಯರವಾಡ ಜೈಲ್, ನಾಸಿಕ್, ನಾಗ್‌ಪುರ, ಥಾಣೆ, ಕೊಲ್ಲಾಪುರ, ಸೋಲಾಪುರ್, ಅಮರಾವತಿ, ಧುಲೆ, ಸತಾರಾ, ಸಾಂಗ್ಲೀ ಮತ್ತು ಸಾವಂತವಾಡಿ ಜೈಲುಗಳಲ್ಲಿ ಮಾತ್ರ ಇರಿಸುತ್ತಾರೆ.

ಇಂದು ಖಾಸಗಿ ಕಂಪೆನಿ ಅಥವಾ ಸರಕಾರಿ ಕಚೇರಿಗಳಿಗೆ ಭೇಟಿ ನೀಡಿದಾಗ ದೊಡ್ಡ ಹುದ್ದೆಗಳಲ್ಲಿರುವ ಅಧಿಕಾರಿಗಳ ಕುರ್ಚಿಗಳು ಆಧುನಿಕವಾಗಿರುತ್ತವೆ. ಆದರೆ ಮುಂಬೈ ಮಹಾನಗರದಲ್ಲಿ 'ದರೋಡೆ ನಿರೋಧಕ ದಳ' (ಆಂಟಿ ರಾಬರಿ ಸ್ಕ್ವಾಡ್) ಅಥವಾ ಪೊಲೀಸ್ ಹೆಡ್ ಕ್ವಾರ್ಟರ್‌ನ ಹಫ್ತಾ ನಿರೋಧಕ ಘಟಕದ ಕಚೇರಿಗೆ ತೆರಳಿದರೆ ಅಲ್ಲಿ ಈಗಲೂ ಹಳೆಯ ಕಾಲದ ಮರದ ಕುರ್ಚಿಗಳೇ ಕಂಡು ಬರುತ್ತವೆ. ಇದು ಬಿಸಿಲಿಗೂ ಆರಾಮದಾಯಕ. ಇದನ್ನು ತಯಾರಿಸಿದವರು ವಿವಿಧ ಜೈಲುಗಳಲ್ಲಿನ ಕೈದಿಗಳು. ಮುಂಬಯಿ ಸಮೀಪದ ಥಾಣೆ ಜೈಲಿನಲ್ಲಿ ಇಂತಹ ಮರದ ಕುರ್ಚಿಗಳನ್ನು ತಯಾರಿಸುತ್ತಾರೆ. ಆದರೆ ಪೊಲೀಸ್ ಠಾಣೆಗಳಿಗೆ ಇದನ್ನು ಉಚಿತವಾಗಿ ಕೊಡುವುದಿಲ್ಲ. ಕುರ್ಲಾದ ದರೋಡೆ ನಿರೋಧಕ ದಳದ ಕಚೇರಿಯಲ್ಲಿರುವ ಹಳೆಕಾಲದ ಈ ಕುರ್ಚಿಗಳನ್ನು ಥಾಣೆ ಜೈಲಿನಿಂದ ಖರೀದಿಸಿದಾಗ ಒಂದು ಕುರ್ಚಿಗೆ 7,300 ರೂಪಾಯಿ ನೀಡಿ ಖರೀದಿಸಿದ್ದಾರೆ.

ಕೈದಿಗಳು ತಯಾರಿಸುವ ಇಂತಹ ವಸ್ತುಗಳ ಮಾರಾಟದಿಂದ ಸರ್ಕಾರಕ್ಕೆ ಭಾರೀ ಲಾಭ ಬರುತ್ತದೆ. ಕೈದಿಗಳು ತಯಾರಿಸಿದ ಎಲ್ಲ ವಸ್ತುಗಳನ್ನೂ ಸರ್ಕಾರಿ ಕಚೇರಿಗಳಿಗೇ ಮಾರಾಟ ಮಾಡಲಾಗುತ್ತದೆ. ಅರ್ಕಾರಿ ಕಚೇರಿಯಿಂದ ಅಲ್ಲಿಯ ನೌಕರರೂ ಈ ಸಾಮಗ್ರಿಗಳನ್ನು ಖರೀದಿಸಿ ಒಯ್ಯಬಹುದು. (ಆದರೆ ಎಲ್ಲ ಕಡೆ ಈ ನಿಯಮ ಅನ್ವಯವಾಗುವುದಿಲ್ಲ.) ಎರಡು ವರ್ಷದ ಹಿಂದೆ ಮಹಾರಾಷ್ಟ್ರ ಸರಕಾರಕ್ಕೆ ಜೈಲ್ ಇಂಡಸ್ಟ್ರಿಯಿಂದ 9.15 ಕೋಟಿ ರೂಪಾಯಿ ಲಾಭವಾಗಿದೆ. (2004– 2005 ರಲ್ಲಿ ಈ ಲಾಭ 1.35 ಕೋಟಿ ರೂಪಾಯಿ ಇತ್ತು.) 2013ರಲ್ಲಿ ಮಹಾರಾಷ್ಟ್ರ ಸರ್ಕಾರಕ್ಕೆ ಕೈದಿಗಳು ಉತ್ಪಾದಿಸಿದ ವಸ್ತುಗಳಿಂದ 12–13 ಕೋಟಿ ರೂಪಾಯಿ ಲಾಭವಾಗಿದೆಯಂತೆ.

ಜೈಲ್ ಇಂಡಸ್ಟ್ರಿಯಿಂದ ಸರ್ಕಾರಕ್ಕೆ ಹೆಚ್ಚು ಲಾಭ ಬರಲು ಕಾರಣವಿದೆ. ಜೈಲುಗಳಲ್ಲಿ ಸರ್ಕಾರ ಕೈದಿಗಳಿಗೆ ನೀಡುವ ಕೂಲಿ ಅತ್ಯಂತ ಕಡಿಮೆ. ಹೊರಗೆ ಒಬ್ಬ ಕಾರ್ಮಿಕನಿಗೆ ದಿನಕ್ಕೆ 600ರಿಂದ 800 ರೂಪಾಯಿ ಕೂಲಿ ಸಿಗುವ ಕೆಲಸಕ್ಕೆ ಜೈಲಿನಲ್ಲಿ ಕೈದಿಗಳಿಗೆ 50 ರೂಪಾಯಿ ಕೂಡಾ ಸಿಗುವುದಿಲ್ಲ. ಕೆಲವು ಸಲ ಇದಕ್ಕಿಂತಲೂ ಕಡಿಮೆ ಕೂಲಿ ಸಿಗುತ್ತದೆ.

ಶಿಕ್ಷೆಗೆ ಗುರಿಯಾದ ಕೈದಿಗಳು ಜೈಲುಗಳಲ್ಲಿ ಬೆಳಿಗ್ಗೆ 8 ರಿಂದ ಸಂಜೆ 4 ರ ತನಕ ಕೆಲಸ ಮಾಡುತ್ತಾರೆ. ಮಧ್ಯಾಹ್ನ ಊಟಕ್ಕೆ ಕೇವಲ 30 ನಿಮಿಷಗಳ



ಅವಧಿ ನೀಡಲಾಗುತ್ತದೆ. ಇಡೀ ತಿಂಗಳ ಸಂಬಳವನ್ನು ಒಟ್ಟುಗೂಡಿಸಿ ಅದರಲ್ಲಿ ಶೇಕಡಾ 10ರಷ್ಟು ಹಣವನ್ನು ಪ್ರತಿ ತಿಂಗಳೂ ಕೈಗೆ ನೀಡುತ್ತಾರೆ. ಈ ಹಣದಿಂದ ಜೈಲ್ ಕ್ಯಾಂಟೀನ್‌ನಲ್ಲಿ ಕೈದಿಗಳು ತಮ್ಮ ಇಷ್ಟದ ತಿಂಡಿ ತಿನಿಸುಗಳನ್ನು ಸವಿಯ–ಬಹುದು. ಉಳಿದ ಹಣ ಸರಕಾರದ ಬಳಿ ಜಮಾ ಇರುತ್ತದೆ. ಕೈದಿಯ ಸಜೆ ಪೂರ್ಣಗೊಂಡ ನಂತರ ಬಿಡುಗಡೆ ಆಗುವಾಗ ಹೀಗೆ ಜಮಾ ಮಾಡಲಾದ ಒಟ್ಟು ಹಣವನ್ನು ನೀಡಲಾಗುತ್ತದೆ.

ಥಾಣೆ ಜೈಲ್‌ನ ಹೊರಗೆ ಸಾರ್ವಜನಿಕರೂ ಕೈದಿಗಳು ಉತ್ಪಾದಿಸಿದ ವಸ್ತುಗಳನ್ನು ಖರೀದಿಸಬಹುದು. ಈ ಜೈಲ್‌ನಲ್ಲಿ ಸಣ್ಣ ಪುಟ್ಟ ಮರದ ಆಟಿಕೆಗಳೂ ತಯಾರಾಗುತ್ತವೆ. ಚರ್ಮದ ಬ್ಯಾಗ್ ಗಳನ್ನು ಜೈಲುಗಳಲ್ಲಿ ತಯಾರಿಸುತ್ತಾರೆ. ಅಷ್ಟೇ ಅಲ್ಲ, ಚಪ್ಪಲಿ, ಶೂಗಳನ್ನೂ ಕೈದಿಗಳು ತಯಾರಿಸುತ್ತಾರೆ. ಆಗ್ರಾದ ಜೈಲಿನಲ್ಲಿ ತಯಾರಾಗುವ ಸೀರೆಗಳು ಬಹಳ ಪ್ರಸಿದ್ಧ. ಅಲ್ಲಿ ಬಾಳೆ ನಾರಿನಿಂದಲೂ ಸೀರೆ ಉತ್ಪಾದಿಸಿ ಮಾರಲಾಗುತ್ತದೆ.

ಆರೋಪಿಯೊಬ್ಬನ ವಿರುದ್ಧ ಮೊಕದ್ದಮೆ ನಡೆದು ಶಿಕ್ಷೆ ದೊರೆತ ನಂತರ ಆತ ಜೈಲಿನ ಸಮವಸ್ತ್ರವನ್ನೇ ಧರಿಸಬೇಕು. ಈ ಬಟ್ಟೆಗಳನ್ನೂ ಕೈದಿಗಳೇ ಹೊಲಿದಿರುತ್ತಾರೆ. ಇಂತಹ ಬಟ್ಟೆಗಳನ್ನು ಮಹಿಳಾ ಕೈದಿಗಳಿಂದ ಹೊಲಿಸುತ್ತಾರೆ. ಮಹಿಳಾ ಕೈದಿಗಳು ಅಗರ್ಬತ್ತಿ, ಹಪ್ಪಳ, ಸಂಡಿಗೆ ಮುಂತಾದ ಖಾದ್ಯ ಪದಾರ್ಥಗಳನ್ನೂ ತಯಾರಿಸುತ್ತಾರೆ.

1993ರ ಬಾಂಬ್ ಸ್ಫೋಟದಲ್ಲಿ ಆರೋಪಿಯಾಗಿದ್ದ ಚಿತ್ರನಟ ಸಂಜಯ್ ದತ್ 2007ರಲ್ಲಿ ಪುಣೆಯ ಯರವಾಡ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾಗ ಕುರ್ಚಿ, ಮೇಜುಗಳನ್ನು ತಯಾರಿಸುವ ಕೆಲಸದ ತರಬೇತಿ ಪಡೆದಿದ್ದ. ಬಳಿಕ ಅಲ್ಪ ಕಾಲದ ಜಾಮೀನು ಸಿಕ್ಕಿ ಹೊರಬಂದು, ಮತ್ತೆ ಜೈಲಿಗೆ ತೆರಳಿದ್ದ. ಆಗ ಆತನಿಗೆ ಬೇರೆ ಕೆಲಸಗಳನ್ನು ನೀಡಲಾಯಿತಂತೆ.

ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಕೈಮಗ್ಗ ವಿಭಾಗ, ಜಮಖಾನೆ ವಿಭಾಗ, ಸಾಬೂನು ಮತ್ತು ಫಿನೈಲ್ ತಯಾರಿ ವಿಭಾಗ– ಹೀಗೆ ಏಳೆಂಟು ವಿಭಾಗಗಳಿದ್ದುವು. ಆಗ ನೂಲು ಪೂರೈಕೆ ಸರಿಯಾಗಿ ಇಲ್ಲದೆ ಕೈಮಗ್ಗಗಳ ಕೆಲಸ ಕುಂಠಿತವಾಗಿತ್ತು. ಅಲ್ಲೇ ಇನ್ನೊಂದು ಬದಿ ಮಾರಾಟ ಮಳಿಗೆ ಇದ್ದು, ಸಾರ್ವಜನಿಕರೂ ಬಂದು ಖರೀದಿಸುತ್ತಿದ್ದರು.

ಕೈದಿಗಳು ರಕ್ತದಾನವನ್ನೂ ಮಾಡುತ್ತಾರೆ. ತೀವ್ರ ಬರಗಾಲದ ಸಂದರ್ಭದಲ್ಲಿ ಬರಪರಿಹಾರ ನಿಧಿಗೂ ಕೈದಿಗಳು ತಾವು ದುಡಿದ ಹಣವನ್ನು ಕೊಡುಗೆಯಾಗಿ ನೀಡಿದ್ದಾರೆ. ಜೈಲಿನೊಳಗೆ ಖಾಸಗಿ ಕಾರ್ಖಾನೆಗಳೂ ಸ್ಥಾಪನೆ ಆಗಿರುವುದು ಇದೆ. ದೆಹಲಿಯ ತಿಹಾರ್ ಜೈಲಿನ 8 ಮತ್ತು 9ನೇ ಘಟಕದಲ್ಲಿ ತನ್ನ ಕಾರ್ಖಾನೆಯನ್ನು ಆರಂಭಿಸಲು ಡಿಆರ್‌ಎಸ್ ಉದ್ಯಮ ಸಮೂಹ ಮುಂದೆ ಬಂದಿತ್ತು.

ಶಿಕ್ಷೆಗೆ ಗುರಿ ಆದಾಕ್ಷಣ ಕೈದಿಗಳಿಗೆ ಅತ್ಯಂತ ಕಡಿಮೆ ಕೂಲಿ ನೀಡುವುದು ಎಷ್ಟು ಸರಿ? ಬೇರೆ ಕಾರ್ಮಿಕರಿಗೂ, ಜೈಲಿನಲ್ಲಿರುವ ಕೈದಿಗಳ ಶ್ರಮಕ್ಕೂ ಏನು ಅಂತರವಿದೆ? ಶ್ರಮಕ್ಕೆ ತಕ್ಕ ಕೂಲಿಯನ್ನು ಜೈಲಿನೊಳಗೂ ನೀಡುವಂತಾಗಬೇಕು. ಬಿಡುಗಡೆ ಆಗುವಾಗ ಸಿಗುವ ದೊಡ್ಡ ಮೊತ್ತದಿಂದ ಹೊಸ ಜೀವನವನ್ನು ಆರಂಭಿಸಲು ಇದು ನೆರವಾಗಬಹುದು.